# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ.ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು, ಹಿಂದಿನ ಕಾರ್ಯ ನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಬೀದರ್ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಲೋಕಾಯುಕ್ತಕ್ಕೆ ವಹಿಸುವ ಕುರಿತು.

**ಓದಲಾಗಿದೆ:-**

1) ಅಪರ ನಿಂಬಂಧಕರು, ವಿಚಾರಣೆಗಳು7&6(ಪ್ರಭಾರ) ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರ ಅ.ಸ.ಪತ್ರ ಸಂ. ಕಂಪ್ಲೇಂಟ್ /ಉಪಲೋಕ್/ಜಿಎಲ್‌ಬಿ-310/2007/ಎಆರ್‌ಇ7&6, ದಿನಾಂಕ: 24-08-2012,05-01-2013,08-02-2013, 26-02-13 ಮತ್ತು 25-03-2013
2) ಉಪ ಲೋಕಾಯುಕ್ತರ ವರದಿ ಸಂ.ಕಂಪ್ಲೇಂಟ್ /ಉಪಲೋಕ್/ಜಿಎಲ್‌ಬಿ-310/2007/ ಎಆರ್‌ಇ-7ದಿನಾಂಕ:21-08-2012.
3) ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ, ಅ.ಟಿ. ಸಂ. ಗ್ರಾಅಪ 177 ವಿಸೇಬಿ 2012, ದಿನಾಂಕ: 31-10-2012.

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ.(1)ರ ಅರೆ ಸರ್ಕಾರಿ ಪತ್ರಗಳಲ್ಲಿ ಅಪರ ನಿಂಬಂಧಕರು, ವಿಚಾರಣೆಗಳು7ಮತ್ತು6 ಕರ್ನಾಟಕ ಲೋಕಾಯುಕ್ತ ಇವರು (1) ಶ್ರೀ ಖುರ್ಷಿದ್, ಹಿಂದಿನ ಕಾರ್ಯದರ್ಶಿ, ಮರಕುಂದ ಗ್ರಾಮ್ ಪಂಚಾಯತ್, ಬೀದರ ತಾಲ್ಲೂಕು ಬೀದರ ಜಿಲ್ಲೆ (2) ಶ್ರೀ ಎಸ್. ಸೂರ್ಯಕಾಂತ್, ಹಿಂದಿನ ಕಾರ್ಯ ನಿರ್ವಾಹಕ ಅಧಿಕಾರಿ, ಬೀದರ ತಾಲ್ಲೂಕು ಪಂಚಾಯತ್, ಬೀದರ, ಹಾಗೂ (3) ಶ್ರೀ ಎಂ. ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ ಬೀದರ್ ತಾಲ್ಲೂಕು ಪಂಚಾಯತ್ ಬೀದರ್ ಇವರುಗಳು 2003-04ನೇ ಸಾಲಿನಲ್ಲಿ ಬೀದರ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ "ನವಗ್ರಾಮ" ಯೋಜನೆಯಡಿ ವಿವಿಧ ಕಟ್ಟಡಗಳನ್ನು ನಿರ್ಮಿಸುವುದರಲ್ಲಿ ಅವ್ಯವಹಾರ ಎಸಗಿದ್ದಾರೆಂದು ದೂರು ಇದ್ದ ಪ್ರಯುಕ್ತ ತನಿಖೆ ಸದರಿ ದೂರಿಗೆ ಸಂಬಂಧಿಸಿದಂತೆ ನಡೆಸಿದಾಗ ಸದರಿಯವರು ತಪ್ಪೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಎಂಬುದಾಗಿ ವರದಿ ಮಾಡಿರುತ್ತಾರೆ.

ಮೇಲೆ ಕ್ರ.ಸಂ.(2)ರಲ್ಲಿ ಓದಲಾದ ಪತ್ರದಲ್ಲಿ ಅಪರನಿಬಂಧಕರು, ವಿಚಾರಣೆಗಳು-7, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಈ ಪ್ರಕರಣದಲ್ಲಿ ಆರೋಪಿತ ಅಧಿಕಾರಿಯವರಾದ (1) ಶ್ರೀ ಖುರ್ಷಿದ್, ಹಿಂದಿನ ಕಾರ್ಯದರ್ಶಿ, ಮರಕುಂದ ಗ್ರಾಮ್ ಪಂಚಾಯತ್, ಬೀದರ ತಾಲ್ಲೂಕು ಬೀದರ ಜಿಲ್ಲೆ (2) ಶ್ರೀ ಎಸ್. ಸೂರ್ಯಕಾಂತ್, ಹಿಂದಿನ ಕಾರ್ಯ ನಿರ್ವಾಹಕ ಅಧಿಕಾರಿ, ಬೀದರ ತಾಲ್ಲೂಕು ಪಂಚಾಯತ್, ಬೀದರ, ಹಾಗೂ (3) ಶ್ರೀ ಎಂ. ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು ಹಿಂದಿನ ಕಾರ್ಯನಿರ್ವಾಹಕ ಅದಿಕಾರಿ ಬೀದರ್ ತಾಲ್ಲೂಕು ಪಂಚಾಯತ್ ಬೀದರ್ ಇವರು ಸರ್ಕಾರಿ

-2-

ಅಧಿಕಾರಿಯಾಗಿದ್ದು, ಸಾರ್ವಜನಿಕರ ಉಪಯೋಗಕ್ಕಾಗಿ "ನವಗ್ರಾಮ" ಯೋಜನೆಯಡಿ ವಿವಿಧ ಕಟ್ಟಡಗಳ ನಿಮಿಸುವುದರಲ್ಲಿ ಅವ್ಯವಹಾರ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡು ಬಂದಿದ್ದು ಕರ್ನಾಟಕ ನಾಗರೀಕರ ಸೇವೆ (ನಡತೆ) ನಿಯಮಾವಳಿ 1966ರಂತೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಸದರಿಯವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಉದ್ದೇಶಿಸಿ, ಆರೋಪಿತ ಅಧಿಕಾರಿಯವರಿಗೆ ಸೂಚನಾ ಪತ್ರ ಜಾರಿ ಮಾಡಲಾಗಿದ್ದು, ಅದಕ್ಕೆ ಅವರು ನೀಡಿದ ಹೇಳಿಕೆ ತೃಪ್ತಿಕರವಾಗಿರದಿರುವುದರಿಂದ ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರಡಿ ಶಿಸ್ತು ಕ್ರಮ ಜರುಗಿಸಲು ಪ್ರಕರಣವನ್ನು ಅದೇ ನಿಯಮಾವಳಿ ನಿಯಮ 14(ಎ) ರನ್ವಯ ತಮಗೆ ಒಪ್ಪಿಸುವಂತೆ ಮಾನ್ಯ ಉಪ ಲೋಕಾಯುಕ್ತರು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರನ್ನು ಕೋರಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ.(3)ರ ಅನಧಿಕೃತ ಟಿಪ್ಪಣಿಯಲ್ಲಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು, ಈ ಮೇಲ್ಕಂಡ ಮೂರು ಅಧಿಕಾರಿ/ನೌಕರರಲ್ಲಿ ಶ್ರೀ ಎಂ. ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು, ಇವರ ಮಾತೃ ಇಲಾಖೆ ಕೃಷಿ ಇಲಾಖೆಯಾಗಿದ್ದು, ಈ ಅಧಿಕಾರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸಕ್ಷಮ ಪ್ರಾಧಿಕಾರಿಯಾದ ಕೃಷಿ ಇಲಾಖೆಯಿಂದ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ಲೋಕಾಯುಕ್ತರಿಗೆ ಅನುಮತಿ ನೀಡುವ ಕುರಿತು, ಪ್ರಸ್ತಾವನೆಯನ್ನು ಕೃಷಿ ಇಲಾಖೆಗೆ ಕಳುಹಿಸಿರುತ್ತಾರೆ.

ಶ್ರೀ ಎಂ. ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು, ಹಿಂದಿನ ಕಾರ್ಯ ನಿರ್ವಾಹಕ ಅಧಿಕಾರಿ(ಪ್ರಭಾರ) ಇವರ ವಿರುದ್ಧ ತನಿಖೆ ನಡೆಸಿ, ನೀಡಿದ ವರದಿಯನ್ನು ಪರಿಶೀಲಿಸಿದಾಗ ಶ್ರೀ ಎಂ. ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು, ಇವರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966ರ ಸೆಕ್ಷನ್ ನಿಯಮ 3(1)ರ ಪ್ರಕಾರ ತಪ್ಪೆಸಗಿದ್ದಾರೆಂಬುದು ಮೇಲ್ನೋಟಕ್ಕೆ (prima-facie) ಕಂಡು ಬಂದಿದ್ದರಿಂದ ಅವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ಪ್ರಕಾರ

ಇಲಾಖಾ ವಿಚಾರಣೆ ಆಯೋಜಿಸಲು ಪ್ರಕರಣವನ್ನು ಅದೇ ನಿಯಮಾವಳಿ 14-ಎ ಪ್ರಕಾರ ಮಾನ್ಯ ಉಪ ಲೋಕಾಯುಕ್ತರವರಿಗೆ ವಹಿಸಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 75 ಕೃಪವಿ 2012,**
**ಬೆಂಗಳೂರು, ದಿನಾಂಕ: 29ನೇ ಏಪ್ರೀಲ್ 2013.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, **ಶ್ರೀ ಎಂ. ಎಸ್. ಕಟಗಿ, ಸಹಾಯಕ ಕೃಷಿ ನಿರ್ದೇಶಕರು, ಹಿಂದಿನ ಕಾರ್ಯ ನಿರ್ವಾಹಕ ಅಧಿಕಾರಿ(ಪ್ರಭಾರ), ತಾಲ್ಲೂಕು ಪಂಚಾಯತಿ ಬೀದರ್** ಇವರ ವಿರುದ್ದ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ.) ನಿಯಮಾವಳಿ 1957ರ ನಿಯಮದಡಿ, ಅವರ ವಿರುದ್ದ ಇಲಾಖಾ ವಿಚಾರಣಾ ಕ್ರಮವನ್ನು ಆಯೋಜಿಸಲು ಅದೇ ನಿಯಮಾವಳಿ ನಿಯಮ 14(ಎ)ರನ್ವಯ ಪ್ರಕರಣವನ್ನು ಕರ್ನಾಟಕ ಉಪ ಲೋಕಾಯುಕ್ತರವರಿಗೆ ವಹಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-5) ಕರ್ನಾಟಕ, ಬೆಂಗಳೂರು.
2) ಗೌರವಾನ್ವಿತ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಅಪರ ನಿಬಂಧಕರು ವಿಚಾರಣೆಗಳು-7&6 (ಪ್ರಭಾರ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
5) ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬೀದರ ಬೀದರ ಜಿಲ್ಲೆ.
6) ಜಂಟಿ ಕೃಷಿ ನಿರ್ದೇಶಕರು, ಬೀದರ್ ಜಿಲ್ಲೆ.
7) ಸಹಾಯಕ ಕೃಷಿ ನಿರ್ದೇಶಕರು, ಬೀದರ್ ಜಿಲ್ಲೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹು ಮಹಡಿ ಕಟ್ಟಡ, ಬೆಂಗಳೂರು.
9) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
10) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
11) ಸರ್ಕಾರದ ಉಪ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಸಹಾಯಕರಿಗೆ,
12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.